# ನಮ್ಮ ಬಾಪು

ಕ್ಷಮೆ ಮತ್ತು ದಯೆಗೆ ಲೋಕದ ಚರಿತ್ರೆಯಲ್ಲಿ ಹೆಸರಾಗಿರುವ ಬುದ್ಧ ಮತ್ತು ಏಸುವಿನ ನಂತರದಲ್ಲಿ ಮಹಾತ್ಮ ಗಾಂಧಿ ಅವರಷ್ಟೇ ಪ್ರಖ್ಯಾತರಾಗಿದ್ದರು. ಕೆಡುಕು ಮಾಡಿದವರಿಗೂ ಒಳಿತನ್ನೇ ಹಾರೈಸುತ್ತಿದ್ದ, ಶತ್ರುವನ್ನೂ ಪ್ರೀತಿಸುತ್ತಿದ್ದ ಮಹಾತ್ಮ ಗಾಂಧಿಯ ಹೆಸರು ಭಾರತದ ಆಡಳಿತಕ್ಕೆ ಇಂದು ಬೇಡವಾಯಿತೆ? ಹಾಗೆಯೇ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮೇಲೆ ನಡೆಸುತ್ತಿರುವ ಯೋಜಿತ ದಾಳಿಯೂ ಕೂಡ ಆಕಸ್ಮಿಕವಲ್ಲ! ಈಚಿನ ಭಾರತದ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆ ಸಾಗುತ್ತಿರುವ ದಿಕ್ಕನ್ನು ಅಂದಾಜಿಸಿ ಹೇಳುವುದಾದರೆ, ಹೌದು ಎನಿಸುತ್ತದೆ. ಮಹಾತ್ಮ ಮತ್ತು ಅಂಬೇಡ್ಕರ್ ಅವರಿಲ್ಲದ ಭಾರತ ತನ್ನ ಎರಡು ಕಣ್ಣುಗಳನ್ನೇ ಕಳೆದುಕೊಂಡಂತೆ!

ದಪ್ತರ್‌ಗಳಿಂದ ಮಹಾತ್ಮನ ಹೆಸರನ್ನು ತೆಗೆಯುವುದು ಸುಲಭ ಇರಬಹುದು! ಆದರೆ ಭಾರತದ ಹೃದಯದಿಂದ ಮಹಾತ್ಮನ ಹೆಸರನ್ನು ತೆಗೆಯುವುದು ಅಷ್ಟು ಸುಲಭವೆ? ಭಾರತೀಯರ ಹೃದಯ ಅಷ್ಟು ದುರ್ಬಲವಲ್ಲ. ಬುದ್ಧದೇವನನ್ನು ದೇಶದಿಂದಲೇ ಉಚ್ಚಾಟಿಸಿದ ಸಂಪ್ರದಾಯವಾದಿಗಳು ಅಂತಿಮವಾಗಿ ಜಯಶಾಲಿಯಾದರೆ! 'ಇಲ್ಲ' ಎಂದು ಚರಿತ್ರೆ ಹೇಳುತ್ತದೆ. ಭಾರತದ ಸಾಹಿತ್ಯ, ಕಲೆ ಹಾಗೂ ಅವೈದಿಕ ದರ್ಶನಗಳಲ್ಲಿ, ಭಾರತೀಯ ಸಂತ ಪರಂಪರೆಯಲ್ಲಿ ಬುದ್ಧದೇವನ ಹೆಸರನ್ನು ಅಳಿಸಲು ಇಂದಿಗೂ ಸಾಧ್ಯವಾಗಿಲ್ಲ! ಭಾರತಕ್ಕೆ ಬುದ್ಧ ಎನ್ನುವುದು ಕೇವಲ ಹೊರಗಿನ ಆಭರಣವಲ್ಲ; ಅದು ಅಂತರಂಗದ ಸತ್ವ ಎಂಬುದನ್ನು ಈ ದೇಶದ ಸಾಂಸ್ಕೃತಿಕ ಚರಿತ್ರೆ ಹೇಳುತ್ತದೆ. ಹೀಗೆಯೇ ಸತ್ಯ ಮತ್ತು ಅಹಿಂಸೆ ಈ ಲೋಕದ ಮೇಲೆ ಇರುವವರೆಗೆ ಮಹಾತ್ಮ ಗಾಂಧಿಯ ಹೆಸರೂ ಕೂಡ ಇರುತ್ತದೆ. ತಮ್ಮ ಜೀವಿತದುದ್ದಕ್ಕೂ ಸಾಮರಸ್ಯದ ಸಮಾಜಕ್ಕಾಗಿ ಮಹಾತ್ಮ ಗಾಂಧಿ ಸವೆಸಿದ ಕಠಿಣ ಹಾದಿಗಿಂತ, ಈಗಿನ ಭಾರತ ತಾನು ನಡೆಯುತ್ತಿರುವ ದಾರಿಗೆ ತಾನೇ ಮುಳ್ಳನ್ನೆಳೆದುಕೊಂಡಿದೆ. ಇದುವರೆಗೆ ಸರ್ವ ಜನಾಂಗದ ಶಾಂತಿಯ ತೋಟದಲ್ಲಿ, ಹಲವು ಹೂಗಳ ಸುಗಂಧಭರಿತ ಸಮಾಜದಲ್ಲಿ ಸಾಮರಸ್ಯದಿಂದ ಬದುಕುತ್ತಿದ್ದ ಭಾರತದ ಜನತೆ ಇನ್ನು ಮುಂದೆ ಅಪ್ರಬುದ್ಧರು ಹಾಗೂ ಕಲುಷಿತಗೊಂಡ ಗಾಳಿಯ ನಡುವೆ ಜೀವಿಸಬೇಕಾಗಬಹುದು!

'ಅಹಿಂಸೆಯು ನನ್ನ ಜೀವನದ ಮೊತ್ತಮೊದಲ ಮೂಲಭೂತ ಅಂಶ ಮತ್ತು ನಿಷ್ಠೆ. ಅದೇ ನನ್ನ ಧರ್ಮ ಸಿದ್ಧಾಂತದ ಕೊನೆಯ ಅಂಶ ಕೂಡ' ಎಂದು ಹೇಳುತ್ತಿದ್ದ ಮಹಾತ್ಮ ಗಾಂಧಿ ಮಾರ್ಗವೂ ಕೂಡ ಗುರಿಯಷ್ಟೇ ಮುಖ್ಯ ಎಂದು ಹೇಳುತ್ತಿದ್ದರು. ಈಗಿನ ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳೂ ಮಹಾತ್ಮ ಹೇಳಿದ ಮಾತುಗಳನ್ನೇ ಮರೆವಿಗೆ ತಳ್ಳಿ, ತನ್ನ 'ಗುರಿ' ಮತ್ತು 'ಮಾರ್ಗ'ದ ಹಳಿಯನ್ನು ಬದಲಿಸಿಕೊಂಡು, ಸಂಘರ್ಷ ಹಾಗೂ ಅಸಹಿಷ್ಣುತೆಯ ಹಳಿಗಳ ಮೇಲೆ ಸಾಗಲು ನಿರ್ಧರಿಸುವ ಭಾರತ ಮುಂದಿನ ದಿನಗಳಲ್ಲಿ ಯಾವ ನಿಲ್ದಾಣಕ್ಕೆ ತಲುಪುತ್ತದೊ ಊಹಿಸುವುದು ತುಸು ಕಷ್ಟವೇ. ಒಟ್ಟಿನಲ್ಲಿ ಬುದ್ಧನಿಲ್ಲದ, ಮಹಾತ್ಮ ಗಾಂಧಿಯಿಲ್ಲದ ಸಮಾಜದಲ್ಲಿ ಜೀವಿಸಲು ಭಾರತ ಅಣಿಯಾಗುತ್ತಿದೆ ಎಂದು ಇತಿಹಾಸಕಾರರು ವ್ಯಾಖ್ಯಾನಿಸಬಹುದು!

ವಾಸ್ತವದಲ್ಲಿ ಮಾನವೀಯತೆ, ಕನಿಷ್ಠ ಮಟ್ಟದ ಸರಳತೆ, ಪ್ರಾಮಾಣಿಕತೆ, ಮಾನವ ಪ್ರೇಮ, ಅಹಿಂಸೆ, ಪಾರದರ್ಶಕತೆ ಇಂತಹ ಉನ್ನತ ಆದರ್ಶದ ಗುಣಗಳು ಇರುವವರಿಗೆ ಮಾತ್ರ ಮಹಾತ್ಮ ಗಾಂಧಿಯೊಡನೆ ಬಾಳುವೆ ಮಾಡುವ ಅರ್ಹತೆ ಇರುತ್ತದೆ. ಆದರೆ ಅನ್ಯ ಧರ್ಮೀಯರ ಮೇಲೆ ಧರ್ಮದ ಹೆಸರಿನಲ್ಲಿ ನಿಷ್ಕಾರಣವಾಗಿ ದಾಳಿ ಮಾಡುವ ಮನಸ್ಥಿತಿ ಇರುವವರ ನಡುವೆ ಮಹಾತ್ಮ ಗಾಂಧಿ ಇರಬಲ್ಲರೆ? ಇರಲಾರರು! ಏಕೆಂದರೆ ಒಮ್ಮೆ ಅವರೇ ಹೇಳಿದ್ದರು 'ಭಾರತವು ಹಿಂಸೆಯನ್ನು ತನ್ನ ಪಂಥವನ್ನಾಗಿ ಮಾಡಿಕೊಂಡರೆ ಮತ್ತು ಆಗ ನಾನು ಬದುಕಿದ್ದರೆ– ನಾನು ಭಾರತದಲ್ಲಿ ವಾಸಿಸಲು ಸ್ವಲ್ಪವೂ ಇಷ್ಟಪಡುವುದಿಲ್ಲ'.

ಪ್ರೀತಿ ಮತ್ತು ಧರ್ಮದ ಬಗ್ಗೆ ಮಹಾತ್ಮ ಗಾಂಧಿ ಹೇಳಿರುವುದು ಈ ಹೊತ್ತಿಗೆ ಬಹು ಮುಖ್ಯವಾಗಿದೆ: 'ಧರ್ಮದ ನೆಲೆ ಹೃದಯ. ಎಲ್ಲಿ ಪ್ರೀತಿಯಿದೆಯೋ ಅಲ್ಲಿ ದೇವರಿದ್ದಾನೆ. ಈ ಜಗತ್ತಿನಲ್ಲಿರುವ ಅತ್ಯಂತ ಬಲಯುತ ಶಕ್ತಿಯೆಂದರೆ ಪ್ರೀತಿ. ಪ್ರೀತಿಯಿಲ್ಲದ ಜೀವನ ಸಾವಿಗೆ ಸಮ. ಪ್ರೀತಿಯು ಏನನ್ನೂ ಪಡೆದುಕೊಳ್ಳುವುದಿಲ್ಲ, ಕೊಡುವುದಷ್ಟೇ ಅದಕ್ಕೆ ಗೊತ್ತು. ಪ್ರೀತಿ ತಾಳ್ಮೆಯ ಪ್ರತಿರೂಪ. ಪ್ರೀತಿಗೆ ರೋಷವಿಲ್ಲ, ಪ್ರೀತಿಯೆಂದೂ ಪ್ರತೀಕಾರವನ್ನು ಬಯಸುವುದಿಲ್ಲ, ಪ್ರೀತಿ ಸ್ವಾರ್ಥವನ್ನು ಅಳಿಸುತ್ತದೆ. ಅದು ಧೈರ್ಯಶಾಲಿಯ ವಿಶೇಷಾಧಿಕಾರ, ದ್ವೇಷವನ್ನು ಗೆಲ್ಲುವುದು ಪ್ರೀತಿಯಿಂದ ಮಾತ್ರ ಸಾಧ್ಯ. ಪ್ರೀತಿ ಪರಮ ಸತ್ಯ ಮತ್ತು ಅದೇ ಜೀವನದ ನಿಯಮ' ದ್ವೇಷ ಮತ್ತು ಪ್ರತೀಕಾರದಲ್ಲೇ ಮುಳುಗಿರುವ ಮನಸ್ಸುಗಳಿಗೆ ಮಹಾತ್ಮನ ಇಂತಹ ಮಾತುಗಳು ರುಚಿಸಬಲ್ಲವೆ? ಆದ್ದರಿಂದ ದ್ವೇಷದ ಕಿಚ್ಚನ್ನು ನಂದಿಸಲು ನಾವು ಹೊರಗಿರುವ ನೀರಿಗಾಗಿ ಹುಡುಕಾಡಬೇಕಿಲ್ಲ! ಅದನ್ನು ನಂದಿಸುವ ಕರುಣೆಯ ಜಲ ನಮ್ಮೊಳಗೇ ಇದೆ. ಇಂತಹ ಧರ್ಮದ ತಿರುಳನ್ನೆ ಲಿಯೋ ಟಾಲ್‌ಸ್ಟಾಯ್ ಹೇಳಿದ್ದು 'ದೇವರ ರಾಜ್ಯ ನಿಮ್ಮೊಳಗೇ ಇದೆ' ಎಂದು. ವಾಸ್ತವವಾಗಿ ರಾಜಕಾರಣದ ಮೊದಲ ಪಾಠವೇ ಮಹಾತ್ಮನ ಈ ಮಾತುಗಳಿಂದ ಆರಂಭವಾಗಬೇಕು.

ತಮ್ಮ ಹೋರಾಟದ ಹಾದಿಯನ್ನು ಚಾರಿತ್ರ್ಯದ ನೆಲೆಗಟ್ಟಿನ ಮೇಲೆ ಮಹಾತ್ಮ ಗಾಂಧಿ ರೂಪಿಸಿಕೊಂಡಿದ್ದರು. ಗಾಂಧಿ ಮೌಲ್ಯಗಳಿಂದ ಕಟ್ಟಲ್ಪಟ್ಟಿರುವ ಈ ಸಮಾಜ ಅಷ್ಟು ಸುಲಭವಾಗಿ ಸೋಲನ್ನು ಒಪ್ಪಿಕೊಳ್ಳಲಾರದು. ಮಹಾತ್ಮ ಗಾಂಧಿ ದಿಟ್ಟಿಸಿ ನೋಡಿದ ಸಾವಿರಾರು ವ್ಯಕ್ತಿಗಳು ಮಾನವ ಜನಾಂಗದ ಸೇವೆಗಾಗಿ ತಮ್ಮ ಬದುಕನ್ನೇ ಅರ್ಪಿಸಿಕೊಂಡರು. ಈಗಲೂ ಮಹಾತ್ಮನ ಗುಣಗಳನ್ನು ಸ್ವೀಕರಿಸಿ ಬಾಳುತ್ತಿರುವವರು ನಮ್ಮ ನಡುವೆ ಎಲೆ ಮರೆಯ ಹಣ್ಣಿನಂತೆ ಇದ್ದಾರೆ. ಇಂತಹ ಉದಾರ ಚರಿತರ ದೊಡ್ಡ ಪಟ್ಟಿಯೇ ಚರಿತ್ರೆಯ ಪುಟಗಳಲ್ಲಿದೆ. ಭಾರತದ ಏಕತೆಗಾಗಿ ಬದುಕಿದ್ದ ಸತ್ಯ, ಅಹಿಂಸೆಯನ್ನೇ ತನ್ನ ಜೀವಿತದ ಉಸಿರನ್ನಾಗಿಸಿಕೊಂಡಿದ್ದ ಮಹಾತ್ಮನ ಕಣ್ಣುಗಳಿಂದ, ಎರಡಿಲ್ಲದೆ ಬದುಕಿದ್ದ ಅವರ ಬಾಳುವೆಯಿಂದ, ಬತ್ತಿಹೋಗಿರುವ ಭಾರತದ ಮಾನವತೆಯ ದೀಪವನ್ನು ಬೆಳಗಿಸಿಕೊಳ್ಳಬೇಕಾಗಿದೆ.

ಮಹಾತ್ಮ ಗಾಂಧಿ ಬಲಿಯಾದ ದಿನ ಜವಹರಲಾಲ್ ನೆಹರೂ ಹೇಳಿದರು 'ನಮ್ಮ ಜೀವನದ ಬೆಳಕೊಂದು ನಂದಿತು'. ಹೊರಗೆ ನಂದಿದ ಜ್ಯೋತಿಯನ್ನು ಭಾರತ ಇಂದಿಗೂ ತನ್ನೊಳಗೆ ಜತನದಿಂದ ಕಾಪಾಡಿಕೊಂಡು ಬರುತ್ತಿದೆ. ನಾವು ಇಂದು ಆ ಬೆಳಕನ್ನು ನಂದಲು ಬಿಡಬಾರದು.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಬದುಕಿನಲ್ಲಿ ಪರಮಾವಧಿಯ ತೃಪ್ತಿಯನ್ನು ಕೊಡಬಲ್ಲದು ಒಂದೇ ಒಂದು, ತಾನು ಸರಿಯಾಗಿ ನಡೆದಿದ್ದೇನೆ ಎಂಬ ಆತ್ಮವಿಶ್ವಾಸ.
  —ಶಿವರಾಮ ಕಾರಂತ
- ಅಧಿಕಾರಕ್ಕೆ ಬಂದೊಡನೆ ಜನ ಕೊಂಕು ಬುದ್ಧಿಯವರಾಗುತ್ತಾರೆ. ಏಕೆಂದರೆ ಆ ಸ್ಥಾನದಲ್ಲಿ ಸತ್ಯಸಂಧತೆಯಿಂದ ಪ್ರಯೋಜನವಿಲ್ಲ.
  —ಇ.ಎಂ. ಫಾರೆಸ್ಟರ್
- ಅಸೂಯೆಗೆ ಗುರಿಯಾಗುವುದು, ಕನಿಕರಕ್ಕೆ ಪಾತ್ರವಾಗುವುದಕ್ಕಿಂತ ಎಷ್ಟೋ ಮೇಲು.
  —ಹೆರೊಡೊಟಸ್
- ಯಾವಾಗಲೂ ಉದಾರವಾಗಿ ದಾನ ಮಾಡು. ಪ್ರತಿಯಾಗಿ ಏನನ್ನೂ ಆಶಿಸಬೇಡ. ಆಗ ನಿನಗೆ ಪ್ರತಿಫಲವು ಹೆಚ್ಚಾಗಿ ಬರುವುದು.
  —ಏಸುಕ್ರಿಸ್ತ
- ಕವಿತೆಯಂತೆ ಹಣ ಕೂಡ ಬಲು ದೊಡ್ಡ ನಿಗೂಢ.
  —ಸೀಮಸ್ ಹೀಮ
- ದಬ್ಬಾಳಿಕೆ, ಅತ್ಯಾಚಾರಗಳಿಂದ ಯಾವ ರಾಜ್ಯವೂ ಉಳಿದಿಲ್ಲ, ಉಳಿಯುವುದಿಲ್ಲ. ಇದು ಇತಿಹಾಸ ನಮಗೆ ಕಲಿಸುವ ಪಾಠ.
  —ಮಹಾತ್ಮ ಗಾಂಧಿ
- ನಂಬಿಕೆ, ಸನ್ನಡತೆ, ಒಳ್ಳೆಯ ಅಭ್ಯಾಸಗಳು, ಉತ್ತಮ ಬಾಂಧವ್ಯ– ಇವೇ ಯಶಸ್ಸಿಗಿರುವ ದಾರಿಗಳು.
  —ಸಿ. ರಾಜಗೋಪಾಲಾಚಾರಿ
- ಆಸೆ ಎಂಬುದು ವಿಷದ ಆಹಾರವಿದ್ದಂತೆ.
  —ಬುದ್ಧ